
ಹೇಳಿಕೊಳ್ಳುತ್ತಾ ಬರೆದಿದ್ದಾರೆ. ಕೃತಿಯ ಶೈಲಿ ಮತ್ತು ನಿರೂಪಣೆಯ ಬಗ್ಗೆ ಇಷ್ಟುದ್ದ ಬರೆಯಲು ಕಾರಣವೆಂದರೆ, ಅವು ವಿಮರ್ಶೆಯ ಪೊಳ್ಳು ಗಾಂಭೀರ್ಯವನ್ನು ಮುರಿಯುತ್ತವೆ. ನವೋದಯ ಕಾಲದ ರಸವಿಮರ್ಶೆಯ ಲೋಕಾಭಿರಾಮದ ಮಾತುಗಳು ಇಲ್ಲಿಲ್ಲ. ಆದರೆ 'ಹೀಗಲ್ಲವೆ?' ಎನ್ನುವ ಮುಕ್ತತೆ ಇದೆ.

ಕೃತಿಯ ಮುಖ್ಯ ಪ್ರಸ್ತಾವನೆಗಳನ್ನು ರಘುನಂದನ ಒಂದು ಚಿಕ್ಕ ಪಟ್ಟಿಯ ರೂಪದಲ್ಲಿ ಕೊಟ್ಟಿದ್ದಾರೆ (ಪು. 250). ಕೃತಿಯ ಜಿಜ್ಞಾಸೆ ಶುರುವಾಗುವುದು 'ಉಯ್ಯಾಲೆ' ಸಂಕಲನದಲ್ಲಿರುವ ದ.ರಾ. ಬೇಂದ್ರೆಯವರ ಅಷ್ಟ ಷಟ್ಪದಿಗಳ ಓದಿನ ಮೂಲಕ. ಇವು ಬೇಂದ್ರೆಯವರ ಕಾವ್ಯದಲ್ಲಿಯೇ ವಿಭಿನ್ನ ಸ್ವರೂಪದ್ದವಾಗಿದ್ದು – ವಿಚಾರಗಳ ಸಾಂದ್ರತೆ, ಅದಕ್ಕೆ ಸರಿಸಾಟಿಯಾಗಿರುವ ರೂಪಕ ಪ್ರತಿಮೆಗಳ ಅಚ್ಚರಿ ಹುಟ್ಟಿಸುವ ಶ್ರೀಮಂತಿಕೆ, ಅವುಗಳ ಜೋಡಣೆ ಮತ್ತು ಷಟ್ಪದಿಗಳ ಸಾವಯವ ಆಕೃತಿಯಿಂದಾಗಿ ಅನನ್ಯವಾಗಿವೆ. ಇವೆಲ್ಲಕ್ಕಿಂತ ಮಿಗಿಲಾಗಿರುವುದು ಚಿಂತನಶೀಲತೆಯ ಸಂಕೀರ್ಣತೆ ಮತ್ತು ಸೃಜನಶೀಲವಾದ ವೈಚಾರಿಕತೆ. ಎಂದಿನಂತೆ ಬೇಂದ್ರೆಯವರ ವೈಚಾರಿಕತೆಯ ಮೂಲಗಳು ಹಲವು ವಿಭಿನ್ನ ಸ್ರೋತಗಳಲ್ಲಿ ಇವೆ. ಮೂಲಗಳನ್ನು ಸಂಸ್ಕೃತ, ಆರ್ಷೇಯ, ಸ್ಥಳೀಯ, ಜಾನಪದವೆಂದು ವಿಂಗಡಣೆ ಮಾಡುವುದು ಅರ್ಥವಿಲ್ಲದ್ದು. ಬೇಂದ್ರೆಯವರ ಕಾವ್ಯದ ಸ್ವಭಾವವೆಂದರೆ, ಅದರ ಮೂಲಗಳನ್ನು ಹುಡುಕುತ್ತ ಹೋದರೆ ಭಾರತೀಯ ನಾಗರೀಕತೆಯ ಮೂಲಗಳನ್ನು ಹುಡುಕಿದಂತೆ. ಅಲ್ಲದೆ, ಮೂಲ ಯಾವುದೇ ಆದರೂ ಅವುಗಳು ಪಡೆಯುವ ರೂಪಾಂತರಗಳು ಅಚ್ಚರಿ ಹುಟ್ಟಿಸುತ್ತವೆ. ಅತ್ಯಂತ ಸ್ಥಳೀಯ, ಜಾನಪದೀಯವೆಂದು ತೋರುವ ಲೋಕದೃಷ್ಟಿಗಳು, ಒಳನೋಟಗಳು ಹುಡುಕಿದರೆ ವೇದ ಉಪನಿಷತ್ತುಗಳಲ್ಲಿ ಹುಟ್ಟು ಪಡೆದಿರುತ್ತವೆ. ಇವೆಲ್ಲವನ್ನು ಬಳಸಿಕೊಂಡು ಅತ್ಯಂತ ಗಹನವಾದ ಮತ್ತು ಜಂಗಮ ಸ್ವಭಾವದ ಚಿಂತನೆಯನ್ನು ಕಾವ್ಯದ ಮೂರ್ತವಾದ, ಐಹಿಕವಾದ ನೆಲೆಯಲ್ಲಿ ಬೇಂದ್ರೆ ನಡೆಸುತ್ತಾರೆ. ಈ ಚಿಂತನೆಯು ಮೂಲತಃ ತಾತ್ವಿಕ ಸ್ವರೂಪದ್ದು. ಆದರೆ ಬೇಂದ್ರೆ ಕಾವ್ಯದಲ್ಲಿ ಚಿಂತನೆ ಅನುಭವಗಳ ಮಧ್ಯ ತೆಳುವಾದ ಗೆರೆಯೂ ಕೆಲವೊಮ್ಮೆ ಇರದಿರಬಹುದು. ಟಿ.ಎಸ್. ಎಲಿಯಟ್ ಕವಿ ಜಾನ್ ಡನ್‌ನ ಬಗ್ಗೆ ಹೇಳಿದ ಹಾಗೆ, 'A thought to Donne was an experience'. ಬೇಂದ್ರೆಯವರಿಗೆ ಚಿಂತನೆಯೂ ಒಂದು ರೂಪಕ ಕ್ರಿಯೆ.




ತುಯ್ಯುವೆಲ್ಲ ನವ್ಯದತ್ತ: ಅಂದತ್ತರ ಉಯ್ಯಾಲೆ ಮತ್ತು ಅದರ ಸುತ್ತ
ಲೇ: ರಘುನಂದನ
ಪು: 264; ಬೆ: 300
ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್, ಬೆಂಗಳೂರು.
ಫೋನ್: 6366024222

ರಘುನಂದನ ಅವರಿಗೆ ಮುಖ್ಯವಾಗಿ ಕಾಣುವುದೆಂದರೆ ಬೇಂದ್ರೆಯವರ ಕಾವ್ಯದಲ್ಲಿ ಇಂಥ ಸಂಕೀರ್ಣತೆ, ಸಾಂದ್ರತೆ 'ಗಂಗಾವತರಣ' ಸಂಕಲನದ ನಂತರ ಅಂಚಿಗೆ ಹೋಗಿಬಿಟ್ಟಿತು. ಅವರ ಕೊನೆಯ ಸಂಕಲನಗಳಲ್ಲಿ ಕೂಡ ಅಲ್ಲಲ್ಲಿ ಉತ್ತಮ ಪದ್ಯಗಳಿವೆ. ಆದರೆ ಕಾವ್ಯ ಸಂವೇದನೆಯ ದೃಷ್ಟಿಯಿಂದ ಅವರ ಒಟ್ಟಾರೆ ಸೃಜನಶೀಲತೆಯು ತನ್ನ ಕಾವನ್ನು ಕಳೆದುಕೊಳ್ಳುತ್ತದೆ. ಇದಕ್ಕೆ ಕಾರಣಗಳನ್ನು ರಘುನಂದನ ಸೂಚಿಸುತ್ತಾರೆ. ಮುಂದೆ ಅವುಗಳನ್ನು ಚರ್ಚಿಸುತ್ತೇನೆ. ಆದರೆ ಅವರಿಗೆ ಹೊಳೆಯುವುದೆಂದರೆ, ಈ ಅಷ್ಟ ಷಟ್ಪದಿಗಳ ಲಕ್ಷಣಗಳು ಇಂಗ್ಲಿಷ್ ಸಾಹಿತ್ಯದ